ದಿನಾಂಕ **:** 20.02.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ನಂ. ರವರ ಪರವಾಗಿ ಶ್ರೀ ಬಿ.ವಿ.ಎಸ್. ವಕೀಲರಿಂದ ಃ**

*ಈ ದಾವೆಯನ್ನು **1** ನೇ ವಾದಿಯವರು ಆತನ ತಾತ ವಿರುದ್ದ ಹಾಕಿದ್ದಾರೆ. ಸರ್ವೆ ನಂ.**95, 127,** ಒಟ್ಟು ನಾಲ್ಕು ಸರ್ವೆ ನಂಬರು ಆಸ್ತಿಗೆ ದಾವೆ ಹಾಕಿದ್ದಾರೆ . ಅವುಗಳು **1** ನೇ ಪ್ರತಿವಾದಿಯವರ ಹೆಸರಿನಲ್ಲಿವೆ. ಸದರಿ ಆಸ್ತಿಗಳು ಆತನಿಗೆ ಅವರ ತಂದೆಯಿಂದ ಬಂದಿದೆ. **1** ನೇ ಪ್ರತಿವಾದಿಗೆ ಅವುಗಳು ತೋಟಿ ತಳಾರಿ ಇನಾಮತಿಯಲ್ಲಿ ಮಂಜೂರಾದ ಆಸ್ತಿಗಳು ಎಂದರೆ ಸರಿಯಲ್ಲ. **1** ನೇ ಪ್ರತಿವಾದಿ ಮೃತಪಟ್ಟು **4** ರಿಂದ **5** ವರ್ಷವಾಗಿದೆ. ಆತನಿಗೆ ಮೂರು ಜನ ಮಕ್ಕಳು ಅವರುಗಳು ಮುನಿಲಕ್ಷಮ್ಮ , ಅವರು ಮೃತಪಟ್ಟಿದ್ದಾರೆ, ನಾರಾಯಣಸ್ವಾ ಮಿ ಮತ್ತು ಹನುಮಕ್ಕ. ನಾರಾಯಣಸ್ವಾ ಮಿ ಮೃತಪಟ್ಟಿದ್ದಾರೆ . ನಾರಾಯಣಸ್ವಾಮಿಯರಿಗೆ ಮದುವೆಯಾಗಿರಲಿಲ್ಲ ಎಂದರೆ ಸರಿ. ಮುನಿಲಕ್ಷ್ಮಮ್ಮನವರು ಮೃತಪಟ್ಟು **25** ರಿಂದ **30** ವರ್ಷವಾಗಿದೆ ಎಂದರೆ ಸರಿ . ಅವರನ್ನು ಯಲವಾರಹಳ್ಳಿ ಗ್ರಾಮಕ್ಕೆ ಮದುವೆ ಮಾಡಿದ್ದಾರೆ. ಅಲ್ಲಿ ಆಕೆಗೆ ಕುಟುಂಬದ ಆಸ್ತಿಗಳು ಇವೆ ಎಂದರೆ ನನಗೆ ಗೊತ್ತಿಲ್ಲ . ಆಕೆಯ ಕುಟುಂಬದ ಆಸ್ತಿಗೆ ಸಂಬಂಧಪಟ್ಟಂತೆ ದಾವೆ ಹಾಕಿರುವುದಿಲ್ಲ. ಆಕೆಗೆ ಅಲ್ಲಿ ಒಟ್ಟು ಎಷ್ಟು ಆಸ್ತಿಗಳು ಇವೆ ಎಂದು ನನಗೆ ಗೊತ್ತಿಲ್ಲ. ಮುನಿಲಕ್ಷ್ಮಮ್ಮನವರಿಗೆ ಒಬ್ಬ ಮಗ. ಅದು **2** ನೇ ಪ್ರತಿವಾದಿ ಎಂದರೆ ಸರಿ . ದಾವಾಆಸ್ತಿಗಳಿಗೂ **2** ನೇ ಪ್ರತಿವಾದಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ . ನಾನು ಮತ್ತು ನನ್ನ ಮಕ್ಕಳು **1** ನೇ ಪ್ರತಿವಾದಿಯ ಆಸ್ತಿಗೆ ದಾವೆ ಹಾಕಲು ಬರುವುದಿಲ್ಲ ಎಂದರೆ ಸರಿಯಲ್ಲ . **2** ನೇ ಪ್ರತಿವಾದಿಯವರು ಆತನ ತಾತನ ಆಸ್ತಿಯ ಮೇಲೆ ದಾವೆ ಹಾಕಿಲ್ಲ ಎಂದರೆ ಸರಿ . ಅದೇ ರೀತಿ ಆತನ ತಂದೆಯ ಆಸ್ತಿಯ ಮೇಲೆ ದಾವೆ ಹಾಕಿಲ್ಲ ಎಂದರೆ ಸರಿ.*

*ನಾನು ಮತ್ತು ಇತರೆ ವಾದಿಗಳು **1** ನೇ ಪ್ರತಿವಾದಿಯ ಆಸ್ತಿಗೆ ಹಕ್ಕುದಾರರಲ್ಲ ಎಂದರೆ ಸರಿಯಲ್ಲ . ಅವರ ಆಸ್ತಿಯನ್ನು ಕಬಳಿಸಲು ಸುಳ್ಳು ಕೇಸು ಹಾಕಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ . ನಾನು ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದೇನೆಂದರೆ ಸರಿಯಲ್ಲ.*

*( ಈ ಹಂತದಲ್ಲಿ ಪ್ರತಿವಾದಿ ನಂ.**4** ರವರ ಪರ ವಕೀಲರು ಕಾಲಾವಕಾಶ ಕೋರಿದ್ದು ನೀಡಲಾಯಿತು.)*

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಲಾಯಿತು).**

ಓದಿ ಹೇಳಿ ಕೇಳಿ ಸರಿಯಾಗಿದೆ.

(ಮನು ಬಿ.ಕೆ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಶ್ರೀನಿವಾಸಪುರ